**ದಿನಾಂಕಃ 29.06.2016 ರಂದು ಪಿಡಬ್ಲ್ಯೂ 2 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ಶ್ರೀ ಎಸ್.ಎನ್. ವಕೀಲರಿಂದ 1ನೇ ಪ್ರತಿವಾದಿ ಪರಃ**

ವಾದಿಯ ತಾಯಿ ಮತ್ತು ನನ್ನ ತಂದೆಯ ತಾಯಿ ಅಕ್ಕ-ತಂಗಿಯರು ಎಂದರೆ ಸರಿ. ನಾನು ಮತ್ತು ವಾದಿ ಸಂಬಂಧಿಕರು ಎಂದರೆ ಸರಿ. ವಾದಿಯರ ಜಮೀನಿನ ಸರ್ವೇ ನಂ. ನನಗೆ ಗೋತ್ತಿಲ್ಲ. ಆ ಜಮೀನಿನ ಚೆಕ್‌ಬಂಧಿ ಹೇಳಲು ಬರುವುದಿಲ್ಲ. ವಾದಿ ಮತ್ತು ಪ್ರತಿವಾದಿಯರ ಎರಡು ಜಮೀನುಗಳು ಆದ ನಂತರ ನನ್ನ ಜಮೀನು ಬರುತ್ತದೆ. ನಮ್ಮ ಜಮೀನಿನ ಸರ್ವೇ ನಂ. 270 ಇರುತ್ತದೆ. ದಾವಾ ಆಸ್ತಿ ದಾರಿಯಲ್ಲಿ ನಾನು ತಿರುಗಾಡಿದ್ದೇನೆ. ಸದರಿ ದಾರಿಯಲ್ಲಿ ನಾನು ತಿರುಗಾಡಿಲ್ಲ ಮತ್ತು ಅದು ಬಂಡಿ ಹಾದಿ ಅಲ್ಲ ಎಂದರೆ ಸರಿಯಲ್ಲ. ವಾದಿಯರು ದಾವಾ ಸ್ವತ್ತು ದಾರಿಯಲ್ಲಿ ಸಲಕರಣೆಗಳನ್ನು ಸಾಗಿಸುತ್ತಾರೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ವಾದಿ ಪ್ರತಿವಾದಿಯರ ಜಮೀನಿನ ಮೇಲೆ ಯಾವತ್ತು ಕೃಷಿ ಸಲಕರಣೆಗಳನ್ನು ತೆಗೆದುಕೊಂಡು ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ಬಂಡಿ ದಾರಿಯ ನಕಾಶೆ ಬಗ್ಗೆ ನಾನು ತಿಳಿದುಕೊಂಡಿಲ್ಲ. ವಾದಿ ಈಗ 10 ವರ್ಷದ ಹಿಂದೆ ತಮ್ಮ ಸ್ವತ್ತನ್ನು ಖರೀದಿ ಮಾಡಿದ್ದಾರೆ. ದಾವಾ ಸ್ವತ್ತು ಮೊದಲು ವಾದಿ ಖರೀದಿ ಮಾಡುವುದಕ್ಕಿಂತ ಎರಡನೇ ಪ್ರತಿವಾದಿಗೆ ಸೇರಿತ್ತು ಎಂದರೆ ಸರಿ. ಎರಡನೇ ಪ್ರತಿವಾದಿ ವಾದಿಗೆ ಜಮೀನನ್ನು ಖರೀದಿ ಕೊಡುವುದಕ್ಕಿಂತ ಮೊದಲು 1ನೇ ಪ್ರತಿವಾದಿಯ ಜಮೀನಿನ ಮೇಲೆ ತಿರುಗಾಡುತ್ತಿದ್ದರು. 1ನೇ ಪ್ರತಿವಾದಿ ಜಮೀನಿನ ಪಕ್ಕದಲ್ಲಿ ಎರಡನೇ ಪ್ರತಿವಾದಿಯ ಚಿಕ್ಕಪ್ಪ ಕರೀಗೌಡರ ಜಮೀನು ಇದೆ ಎಂದರೆ ಸರಿ. ಎರಡನೇ ಪ್ರತಿವಾದಿ ತಂದೆ ತಮ್ಮ ಒಟ್ಟು ಕುಟುಂಬದಲ್ಲಿದ್ದಾಗ ಕರೀಗೌಡರ ಜಮೀನಿನ ಮೇಲೆ ಹಾದು ತಮ್ಮ ಜಮೀನಿನ ಸರ್ವೇ ನಂ. 257 ಕ್ಕೆ ಬರುತ್ತಿದ್ದರು ಎಂದರೆ ಸರಿಯಲ್ಲ. ಎರಡನೇ ಪ್ರತಿವಾದಿಯ ಮನೆತನದಲ್ಲಿ ವಿಭಾಗವಾದ ನಂತರವು ಸಹ ಎರಡನೇ ಪ್ರತಿವಾದಿ ತನ್ನ ಚಿಕ್ಕಪ್ಪನಾದ ಕರೀಗೌಡರ ಜಮೀನಿನಲ್ಲಿ ಹಾದು ತಮ್ಮ ಜಮೀನಿಗೆ ಹೋಗುತ್ತಿದ್ದರು ಎಂದರೆ ಸರಿಯಲ್ಲ. ಈಗಲೂ ಸಹ ಎರಡನೇ ಪ್ರತಿವಾದಿ ಇದೇ ದಾರಿಯನ್ನು ಉಪಯೋಗಿಸುತ್ತಿದ್ದಾರೆ ಎಂದರೆ ಸರಿಯಲ್ಲ. ನನಗೂ ಮತ್ತು 1ನೇ ಪ್ರತಿವಾದಿಯ ಮಧ್ಯೆ ದ್ವೇಷ ಇದೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿ ಹಾಕಿದ ಕ್ರಿಮಿನಲ್ ಪ್ರಕರಣದಲ್ಲಿ ನಾನು ಆರೋಪಿಯಾಗಿದ್ದೆ ಎಂದರೆ ಸರಿ. ವಾದಿ ದಾವಾ ಸ್ವತ್ತು ದಾರಿಯನ್ನು ತಿರುಗಾಡಲು ಬಳಸದೇ ಇರುವುದರಿಂದ ಮತ್ತು ಪ್ರತಿವಾದಿಯರ ವಿರುದ್ಧ ಇರುವ ದ್ವೇಷದಿಂದ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಶ್ರೀ ಶಿವಪ್ಪ ವಕೀಲರಿಂದ 2ನೇ ಪ್ರತಿವಾದಿ ಪರಃ**

ನಾನು ಮತ್ತು ವಾದಿ ದಾಯದಿ ಸಂಬಂಧಿ ಎಂದರೆ ಸರಿ. 2ನೇ ಪ್ರತಿವಾದಿಯ ಜಮೀನಿನಲ್ಲಿ ವಾದಿ ತನ್ನ ಜಮೀನಿಗೆ ಹೋಗಲು ಯಾವುದೇ ದಾರಿ ಇಲ್ಲ ಎಂದರೆ ಸರಿಯಲ್ಲ. ಈ ದಾರಿ ಇರುವ ಬಗ್ಗೆ ನಾನು ಯಾವುದೇ ನಕ್ಷೆ ನೋಡಿಲ್ಲ. ನಾನು ವಾದಿಯ ದಾಯಾದಿ ಸಂಬಂಧಿ ಆಗಿರುವುದರಿಂದ ಅವರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಇ ಒಪ್ಪಿದೆ,

(ರಮೇಶ್ ಎಸ್.ಗಾಣಿಗೇರ)
ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು
ಜೆಎಂಎಫ್‌ಸಿ, ಕೆ.ಆರ್.ನಗರ.

**ದಿನಾಂಕಃ 29.06.2016 ರಂದು ಪಿಡಬ್ಲ್ಯೂ 3 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ಶ್ರೀ ಎಸ್.ಎನ್. ವಕೀಲರಿಂದ 1ನೇ ಪ್ರತಿವಾದಿ ಪರಃ**

ವಾದಿಯ ತಾಯಿ ಮತ್ತು ನನ್ನ ತಂದೆಯ ತಾಯಿ ಅಕ್ಕತಂಗಿಯರು ಎಂದರೆ ಸರಿ. ವಾದಿ ಮತ್ತು ನಾನು ಸಂಬಂಧಿ ಎಂದರೆ ಸರಿ. 1ನೇ ಪ್ರತಿವಾದಿಯ ಜಮೀನಿನ ಚೆಕ್‌ಬಂಧಿ ಹೇಳಲು ಬರುವುದಿಲ್ಲ. ಇವರ ಜಮೀನಿನ ಸರ್ವೇ ನಂ. ಹೇಳಲು ಬರುವುದಿಲ್ಲ. ವಾದಿ ಮತ್ತು ಪ್ರತಿವಾದಿಯರ ಜಮೀನಿನ ಪಕ್ಕದಲ್ಲಿ ನಮ್ಮ ಜಮೀನಿಲ್ಲ ಆದರೆ ನೂರು ಅಡಿ ದೂರದಲ್ಲಿ ಇರುತ್ತದೆ. ನನ್ನ ಜಮೀನಿನ ಸರ್ವೇ ನಂ. 269 ಇರುತ್ತದೆ. 1ನೇ ಪ್ರತಿವಾದಿಯ ಜಮೀನು ನಾಲಾ ಏರಿಗಿಂತ ಹತ್ತು ಅಡಿ ಕೆಳಭಾಗದಲ್ಲಿ ಇದೆ ಎಂದರೆ ಸರಿ. ಸದರಿ ನಾಲಾ ಏರಿಯಿಂದ 1 ನೇ ಪ್ರತಿವಾದಿಯ ಜಮೀನಿನಲ್ಲಿ ಯಾವುದೇ ದಾರಿ ಇಲ್ಲ ಎಂದರೆ ಸರಿಯಿಲ್ಲ. ಸದರಿ 1ನೇ ಪ್ರತಿವಾದಿಯ ಜಮೀನು ನಾಲಾ ಏರಿಗಿಂತ ಹತ್ತು ಅಡಿ ಕೆಳಭಾಗದಲ್ಲಿ ಇರುವುದರಿಂದ ಅಲ್ಲಿ ಯಾವುದೇ ದಾರಿಯ ಕುರುಹು ಇಲ್ಲ ಎಂದರೆ ಸರಿಯಲ್ಲ. ವಾದಿ ಸದರಿ ದಾವಾ ಸ್ವತ್ತಿನ ದಾರಿಯಲ್ಲಿ ಎಂದು ಕೃಷಿ ಸಲಕರಣೆಗಳನ್ನು ತೆಗೆದುಕೊಂಡು ಹೋಗಿರುವುದಿಲ್ಲ ಎಂದರೆ ಸರಿಯಲ್ಲ. 1ನೇ ಪ್ರತಿವಾದಿಯ ಜಮೀನಿನಲ್ಲಿ ಯಾವುದೇ ದಾರಿ ಇರದೇ ಇದ್ದರು ದಾರಿ ಇದೆ ಅಂತ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ದಾರಿಯ ಬಗ್ಗೆ ನಕಾಶೆ ಇದೆ. 1ನೇ ಪ್ರತಿವಾದಿ ತಮ್ಮ ಜಮೀನಿಗೆ ಯಾವುದೇ ಮುಳ್ಳು ಬೇಲಿ ಹಾಕಿಲ್ಲ. ವಾದಿ ಜಮೀನನ್ನು ತೆಗೆದುಕೊಂಡು 10 ರಿಂದ 11 ವರ್ಷ ಆಗಿರುತ್ತದೆ. ದೇವರಾಜು ಇವರ ತಾತನಿಗೆ ಮೂರು ಜನ ಮಕ್ಕಳು ಎಂದರೆ ಸರಿ. ಸರ್ವೇ ನಂ. 257 ಮತ್ತು 258 ಎರಡನೇ ಪ್ರತಿವಾದಿಯ ಚಿಕ್ಕಪ್ಪ ಮತ್ತು ದೊಡ್ಡಪ್ಪಂದಿರಿಗೆ ಸೇರಿದ್ದು ಎಂದರೆ ಸರಿ. 1ನೇ ಪ್ರತಿವಾದಿಯ ಜಮೀನಿನ ಪಕ್ಕದಲ್ಲಿ ಅವರ ಚಿಕ್ಕಪ್ಪನಾದ ಕರೀಗೌಡರ ಜಮೀನು ಇದೆ ಎಂದರೆ ಸರಿ. 2ನೇ ಪ್ರತಿವಾದಿಯ ಮನೆತನದವರು ಒಟ್ಟು ಕುಟುಂಬದಲ್ಲಿದ್ದಾಗ ನಾಲ ಏರಿಯಿಂದ ಕರೀಗೌಡ ಜಮೀನಿನಲ್ಲಿ ಪೂರ್ವಭಿಮುಖವಾಗಿ ನಂತರ ಉತ್ತಾರಾಭಿಮುಖವಾಗಿ ಸರ್ವೇ ನಂ. 257 ಜಮೀನಕ್ಕೆ ಬರುತ್ತಿದ್ದರು ಎಂದರೆ ಸರಿಯಲ್ಲ. 2ನೇ ಪ್ರತಿವಾದಿ ಈಗಲೂ ಕೂಡ ಅದೇ ದಾರಿಯಲ್ಲಿ ತಮ್ಮ ಜಮೀನಿಗೆ ಹೋಗುತ್ತಿದ್ದಾರೆ ಎಂದರೆ ಸರಿಯಲ್ಲ. ವಾದಿ ನಾಲಾ ಏರಿಯಿಂದ ಇಳಿದು ಕರೀಗೌಡನ ಜಮೀನು ಮತ್ತು 2ನೇ ಪ್ರತಿವಾದಿಯ ಜಮೀನಿನಲ್ಲಿ ಹಾದು ತಮ್ಮ ಜಮೀನಿಗೆ ಹೋಗುತ್ತಿದ್ದಾರೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿ ಈ ಮೊದಲು ನಮ್ಮ ಮೇಲೆ ಕ್ರಿಮಿನಲ್ ಪ್ರಕರಣ ದಾಖಲಿಸಿದ್ದರು ಎಂದರೆ ಸರಿ. ಈ ಪ್ರಕರಣದಿಂದ ಈಗಲೂ ಸಹ ಎರಡನೇ ಪ್ರತಿವಾದಿಯ ಜೊತೆ ನನ್ನದು ದ್ವೇಷ ಇರುತ್ತದೆ ಎಂದರೆ ಸರಿಯಲ್ಲ. ವಾದಿ ನನ್ನ ಸಂಬಂಧಿಯಾಗಿರುವುದರಿಂದ ಮತ್ತು 1 ನೇ ಪ್ರತಿವಾದಿಯ ಮೇಲೆ ದ್ವೇಷ ಇರುವುದರಿಂದ ದಾವಾ ದಾರಿ ಇರದೇ ಇದ್ದರು ನಾನು ಇದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಶ್ರೀ ಶಿವಪ್ಪ ವಕೀಲರಿಂದ 2ನೇ ಪ್ರತಿವಾದಿ ಪರಃ**

ಎರಡನೇ ಪ್ರತಿವಾದಿ ಮೊದಲಿನಿಂದಲೂ ಕರೀಗೌಡನ ಜಮೀನಿನಿಂದ ತಮ್ಮ ಜಮೀನಿಗೆ ಹಾದು ಹೋಗುತ್ತಿದ್ದರು ಎಂದರೆ ಸರಿಯಲ್ಲ. ನಾನು ಮತ್ತು ವಾದಿ ವಿಶ್ವಾಷಿತರಾಗಿದ್ದರಿಂದ

ದಾವೆಯಲ್ಲಿ ಹೇಳಿದಂತೆ ಯಾವುದೇ ದಾರಿ ಇರದೇ ಇದ್ದರು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಇ ಒಪ್ಪಿದೆ,

(ರಮೇಶ್ ಎಸ್.ಗಾಣಿಗೇರ)
ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು
ಜೆಎಂಎಫ್‌ಸಿ, ಕೆ.ಆರ್.ನಗರ.